ಇ) ಅವರ ಜಾಗಕ್ಕೆ ವರ್ಗವಾಗಿರುವವರ ಕಡ್ಡಾಯ ನಿರೀಕ್ಷಣಾ ಅವಧಿಗೆ ಜವಾಬ್ದಾರರು ಯಾರು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಇಲ್ಲ

ಆ) ಅಧಿಕಾರಿಗಳು ಯಾವುದೇ ಹುದ್ದೆಯಲ್ಲಿ ಪ್ರಭಾರದಲ್ಲಿರುವವರೆಗೆ ಆ ಹುದ್ದೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಅರ್ಹರಿರುತ್ತಾರೆ.

ಇ) ಯಾರು ಜವಾಬ್ದಾರರು ಎಂಬ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹುಡಾಗ್ರಾಮದ ಏತನೀರಾವರಿ ಯೋಜನೆ

530 - ಶ್ರೀ ಬಿ. ಹಂಪನಾಗೌಡ (ಸಿಂಧನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನಲ್ಲಿ ಬರುವ ಹುಡಾ ಗ್ರಾಮದ ಏತ ನೀರಾವರಿ ಯೋಜನೆಯು ಯಾವ ಹಂತದಲ್ಲಿದೆ?

ಆ) ಈ ಯೋಜನೆಗೆ ಸರ್ಕಾರದವರು ಮಂಜೂರು ಮಾಡಿದ ಹಣ ಎಷ್ಟು ಹಾಗೂ ಇಲ್ಲಿಯವರೆಗೆ ಖರ್ಚಾದ ಹಣ ಎಷ್ಟು?

ಇ) ಈ ಯೋಜನೆಯಿಂದ ಎಷ್ಟು ಎಕರೆ ಪ್ರದೇಶ ನೀರಾವರಿಯಾಗುತ್ತದೆ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಈ ಯೋಜನೆಯು ಪ್ರಾಥಮಿಕ ತನಿಖಾ ಪರಿಶೀಲನಾ ಹಂತದಲ್ಲಿದೆ.

ಆ) 1993-94 ನೇ ಸಾಲಿನ ಆಯವ್ಯಯದಲ್ಲಿ (ಆಪೆಂಡಿಕ್ಸ್ -ಇ ತಿದ್ದುಪಡಿ) ೩೫ ಲಕ್ಷ ರೂ.ಗಳ ಅಂದಾಜು ವೆಚ್ಚ ಮತ್ತು 10.50 ಲಕ್ಷ ರೂ.ಗಳ ಅನುದಾನ ಹೊಂದಿದೆ. ಯಾವುದೇ ಹಣ ಖರ್ಚು ಮಾಡಿರುವುದಿಲ್ಲ.

ಇ) ಇನ್ನೂ ನಿರ್ಧಾರವಾಗಿಲ್ಲ.

ತುಂಗಭದ್ರಾ ಅಚ್ಚುಕಟ್ಟು ಪ್ರಾಧಿಕಾರದ ಅಭಿವೃದ್ಧಿ

529ಎ - ಶ್ರೀ ಬಿ. ಹಂಸನಗೌಡ (ಸಿಂಧನೂರು) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿಗೆ ತುಂಗಭದ್ರಾ ಅಚ್ಚುಕಟ್ಟು ಪ್ರಾಧಿಕಾರಕ್ಕೆ ರಸ್ತೆಗಳ ಮತ್ತು ಸೀಳು ಕಾಲುವೆಗಳ ಅಭಿವೃದ್ಧಿ ಕೆಲಸಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು?

ಆ) ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ?

ಇ) ಎಷ್ಟು ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):

ಅ) ಬಿಡುಗಡೆ ಮಾಡಿದ ಹಣ (ರೂ. ಲಕ್ಷಗಳಲ್ಲಿ)

ರಸ್ತೆಗಳು : ರೂ. 13.00 ಲಕ್ಷ

ಸೀಳು ಕಾಲುವೆಗಳು : ರೂ. 4.00 ಲಕ್ಷ

ಆ) ಖರ್ಚಾಗಿರುವ ಹಣ : ಅಚ್ಚುಕಟ್ಟು ರಸ್ತೆಗಳು ರೂ. 2,89,487.00 ಸೀಳು ಕಾಲುವೆಗಳು. ರೂ. 2,00,929.00 (ದಿನಾಂಕ: 29-8-93ರ ವರೆಗೆ)

ತಾಲ್ಲೂಕುವಾರು ರಸ್ತೆ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಮುಂದುವರೆದ ಕೆಲಸ	ಹೊಸ ಕೆಲಸಗಳು
1)	ಬಳ್ಳಾರಿ	16 ರಸ್ತೆಗಳು	3 ರಸ್ತೆಗಳು
2)	ಸಿರುಗುಪ್ಪ	10 ರಸ್ತೆಗಳು	2 ರಸ್ತೆಗಳು
3)	ಹೊಸಪೇಟ	3 ರಸ್ತೆಗಳು	-
4)	ಸಿಂಧನೂರು		3 ರಸ್ತೆಗಳು
5)	ಮಾನ್ವಿ	33 ರಸ್ತೆಗಳು	3 ರಸ್ತೆಗಳು
6)	ರಾಯಚೂರು		1 ರಸ್ತೆ
7)	ಗಂಗಾವತಿ	6 ರಸ್ತೆಗಳು	4 ರಸ್ತೆಗಳು
	ಒಟ್ಟು	**68 ರಸ್ತೆಗಳು**	**16 ರಸ್ತೆಗಳು**

(ಗೊಂದಲ)

ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕೋರಿ ಪ್ರಸ್ತಾಪ

ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತು

(ಗೊಂದಲ)

ಅಧ್ಯಕ್ಷರು : ಹೇಳಿ ಏನು ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷದವರು ಧರಣಿ ಮಾಡತಕ್ಕಂಥಾದ್ದು ಇತಿಹಾಸದಲ್ಲಿ ಎಲ್ಲೂ ಇಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಏನು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುತ್ತಾರೆ, ಅದಕ್ಕೆ ಆಳುವ ಪಕ್ಷದವರು ಮಾತನಾಡತಕ್ಕಂತಹ ಹಕ್ಕು ಇದೆ. ಇನ್ನು ಎರಡನೆಯದಾಗಿ ಅವಿಶ್ವಾಸ ನಿರ್ಣಯದ ಚರ್ಚೆಯ ಕಾಲದಲ್ಲಿ ಅದ ಸಂಸತ್ತಿನಲ್ಲಿ ಇರಬಹುದು, ಶಾಸನ ಸಭೆಯಲ್ಲಿ ಇರಬಹುದು, ಆಳುವ ಪಕ್ಷದ ಸದಸ್ಯರು ನಾವು ಎತ್ತತಕ್ಕಂತಹ ಪ್ರಶ್ನೆಗಳಿಗೆ ಸದಸ್ಯರಾಗಿ ಉತ್ತರ ಕೊಡತಕ್ಕಂತಹ ಅಥವಾ ಅವರು ತಮ್ಮ ಅನಿಸಿಕೆಗಳನ್ನು ಹೇಳತಕ್ಕಂತಹ ಅವಕಾಶ ಇದೆ. ಸಂಸದೀಯ ವ್ಯವಸ್ಥೆಯಲ್ಲಿ ಮತ್ತೂ ಒಂದು ಪದ್ಧತಿ ಇದೆ. ಅದೂ ಜವಾಬ್ದಾರಿ ಇರತಕ್ಕಂತಹ ಮಂತ್ರಿಗಳು ಇಂಟರ್‌ವೀನ್ ಎಂದು ಮಾಡಿದರು. ಇದೂ ಆಗಲಿಲ್ಲ. ಎಂದರೆ ನನ್ನ ಅರ್ಥದಲ್ಲಿ ಈ ಒಂದು ಮನೆಯ ನಾಯಕರು ಅವರನ್ನು ರಕ್ಷಣೆ ಮಾಡತಕ್ಕಂತಹ ಮಂತ್ರಿಗಳೂ ಇಲ್ಲ, ಅವರನ್ನು ರಕ್ಷಣೆ ಮಾಡತಕ್ಕಂಥಹ ಸದಸ್ಯರೂ ಇಲ್ಲ. ಆದುದರಿಂದ ನನ್ನ ದೃಷ್ಟಿಯಲ್ಲಿ ಅವಿಶ್ವಾಸ ನಿರ್ಣಯ ನಾವು ಏನು ಮಂಡಿಸಿದ್ದೇವೆ. ಇವರಿಗೆ ಡಿಫೆಡ್ ಮಾಡತಕ್ಕಂಥವರು ಯಾರೂ ಇಲ್ಲದೇ ಇರುವುದರಿಂದ ಇದು ಪಾಸ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

(ಗೊಂದಲ)